ನಾಲ್ಕೈದು ಪುಸ್ತಕಗಳನ್ನು ರಾಶಿ ಹಾಕಿಕೊಂಡು ಏಕಕಾಲದಲ್ಲಿ ಕಣ್ಣಾಡಿಸುವವರನ್ನು ಕಂಡಿದ್ದೇನೆ. ಇದರಿಂದ ನಿಮಗೆ ಯಾವ ಅಂಶವೂ ಖಚಿತವಾಗಿ ಮನದಟ್ಟು ಆಗುವುದಿಲ್ಲ. ನಿಮ್ಮ ಮುಂದೆ ಪುಸ್ತಕದ ರಾಶಿ ಹೆಚ್ಚು ಇರುತ್ತದೆಯೇ ಹೊರತು, ವಿಷಯ ಮನದಟ್ಟು ಆಗುವುದಿಲ್ಲ. ಗೊಂದಲ ಹೆಚ್ಚಾಗಲು ಇದು ಸಹಕಾರಿ. ಹೆಣ್ಣು ಮಕ್ಕಳು ಈ ರೀತಿ ಓದುವುದನ್ನು ನಾನು ಹೆಚ್ಚು ಕಂಡಿದ್ದೇನೆ.

ನಿದ್ದೆಗೆಟ್ಟು ಓದಿದರೆ, ಹಸಿವಿನಿಂದ ಹೊಟ್ಟೆ ಖಾಲಿ ಇಟ್ಟು ಓದಿದರೆ ತುಂಬಾ ಪ್ರಯೋಜನವಾಗುತ್ತದೆ ಎಂದು ಎಷ್ಟೋ ಮಂದಿ ನಂಬಿರುತ್ತಾರೆ. ಇದು ಸರಿಯಾದದ್ದಲ್ಲ. ಕೆಲವರಲ್ಲಿ ಧಾರ್ಮಿಕ ಶ್ರದ್ಧೆ ಹೆಚ್ಚಾಗಿ, ಪರೀಕ್ಷೆ ಹತ್ತಿರ ಬರುತ್ತಿದ್ದಂತೆ ಅತಿಯಾಗಿ ದೇವರು ದಿಂಡರನ್ನು ನಂಬುವುದು, ಹರಕೆ ಹೊರುವುದು, ಇತ್ಯಾದಿಗಳನ್ನು ಮಾಡುತ್ತಾರೆ. ನಿಮ್ಮ ನಿಮ್ಮ ನಂಬಿಕೆ ನಿಮಗೆ. ಆದರೆ ಪ್ರಯತ್ನವನ್ನೇ ಮಾಡದೆ ಕೇವಲ ದೇವರಿಗೆ ಹರಕೆ ಹೊತ್ತರೆ ನಿಮ್ಮ ಕೆಲಸ ಆಗುವುದಿಲ್ಲ.



## ಪರೀಕ್ಷೆಯ ದಿನದಂದು ಹೇಗಿರಬೇಕು?

- ವೇಳಾಪಟ್ಟಿಯನ್ನು ಸರಿಯಾಗಿ ಗಮನಿಸಬೇಕು.
- ಪರೀಕ್ಷೆ ನಡೆಯುವ ದಿನದಂದು ಮನೆಯಿಂದ ಸಾಕಷ್ಟು ಮುಂಚಿತವಾಗಿ ಹೊರಡಬೇಕು. ಹಳ್ಳಿಗಾಡಿನಿಂದ, ಬಸ್ಸು ಸಂಪರ್ಕ ಸರಿಯಾಗಿ ಇಲ್ಲದೆ ಇರುವ ಊರುಗಳಿಂದ, ಕಾಡಿನ ದಾರಿಯಿಂದ ಬರುವವರು ನೀವಾಗಿದ್ದರೆ ಸಾಕಷ್ಟು ಮುಂಚಿತವಾಗಿಯೇ ಹೊರಡಿ. ಪರೀಕ್ಷೆ ಬೆಳಗ್ಗೆ 10 ಗಂಟೆಗೆ ಇದ್ದರೆ, ನೀವು 9 ಗಂಟೆಗೆಲ್ಲ ಅಲ್ಲಿ ಇರಬೇಕು.
- ನಿಮ್ಮ ಕೊಠಡಿ ಎಲ್ಲಿ ಬರುತ್ತದೆ ಎಂದು ತಿಳಿದುಕೊಂಡಿರಬೇಕು.
- ಮನೆಯಿಂದ ಹೊರಡುವ ಮೊದಲು ಬರವಣಿಗೆ ಸಾಮಗ್ರಿಗಳು ಸಾಕಷ್ಟು ಇವೆಯೇ ಹಾಲ್ ಟಿಕೆಟ್, ಐಡೆಂಟಿಟಿ ಕಾರ್ಡ್ ಎಲ್ಲವೂ ಇವೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು.
- ಪ್ರವೇಶ ಪತ್ರದಲ್ಲಿ ಯಾವ ನಿಬಂಧನೆಗಳು ಇವೆ ಅದೇ ರೀತಿಯಲ್ಲಿ ನೀವು ಸಿದ್ಧರಾಗಿರಬೇಕು.
- ಪರೀಕ್ಷೆಯ ಹಾಲ್ ಪ್ರವೇಶಿಸುವ ಮೊದಲು, ಹಾಲ್ ಟಿಕೆಟ್ ಐಡೆಂಟಿಟಿ ಕಾರ್ಡ್ ಬರವಣಿಗೆ ಸಾಮಗ್ರಿ ಹೊರತುಪಡಿಸಿ ಬೇರೇನೂ ನಿಮ್ಮ ಬಳಿ ಇಲ್ಲ ಎನ್ನುವುದನ್ನು ಖಚಿತಪಡಿಸಿಕೊಂಡು ಕೊಠಡಿಯ ಒಳಗೆ ತೆರಳಿ.
- ಯಾವುದೇ ಚೀಟಿ, ಟಿಪ್ಪಣಿ ಬರೆದುಕೊಂಡದ್ದು ನಿಮ್ಮ ಬಳಿ ಇಲ್ಲ ಎನ್ನುವುದನ್ನು ಖಚಿತಪಡಿಸಿಕೊಳ್ಳಿ.
- ಪರೀಕ್ಷೆ ಶುರುವಾಗುವ ತನಕ ಓದುತ್ತಿರುವುದು ಒಳ್ಳೆಯ ಲಕ್ಷಣವಲ್ಲ. ಅದರಿಂದ ಗೊಂದಲ ಹೆಚ್ಚಾಗುತ್ತದೆ. ಕೆಲವರು ಪರೀಕ್ಷಾ ಹಾಲಿನ ಹತ್ತಿರ ಬಂದು ಏನನ್ನೋ ಓದುವಂತೆ ಒತ್ತಡ ಹೇರುತ್ತಾರೆ. ಅದು ತುಂಬ ಮುಖ್ಯ ಎಂದೂ, ತಮ್ಮ ಕಡೆಯವರು ಯಾರೂ ಪ್ರಶ್ನೆ ಪತ್ರಿಕೆ ನೋಡಿದ್ದಾರೆ ಎಂದೂ ಸುಳ್ಳು ಸುದ್ದಿ ಹಬ್ಬಿಸುತ್ತಾರೆ. ಇದರಿಂದ ಗೊಂದಲ ಉಂಟು ಮಾಡುವುದು ಅವರ ಉದ್ದೇಶ ಅಷ್ಟೇ. ನೀವು ಗಾಬರಿ ಬಿದ್ದಾಗ ನಿಮ್ಮ ಮನಸ್ಸು ಮತ್ತಷ್ಟು ಗೊಂದಲಕ್ಕೆ ಈಡಾಗುತ್ತದೆ. ಆ ರೀತಿಯ ಗೊಂದಲಗಳಿಗೆ ಅವಕಾಶ ಮಾಡಿಕೊಳ್ಳಬೇಡಿ.
- ಪರೀಕ್ಷೆಯ ಹಿಂದಿನ ದಿನ ವಾಟ್ಸ್‌ಆ್ಯಪ್ ಇತ್ಯಾದಿಗಳಲ್ಲಿ ಪ್ರಶ್ನೆಪತ್ರಿಕೆ ಲೀಕ್ ಆಗಿದೆ ಎನ್ನುವ ಅಥವಾ ಪರೀಕ್ಷೆಯ ಪ್ರಶ್ನೆಪತ್ರಿಕೆ ದೊರಕಿದೆ ಎನ್ನುವ ಸುಳ್ಳು ಸುದ್ದಿಗಳು ನಿಮ್ಮನ್ನು ದಿಕ್ಕು ತಪ್ಪಿಸಬಹುದು. ಅಂತಹವುಗಳನ್ನು ನಂಬಬೇಡಿ. ಅಂತಹ ಮಾಹಿತಿಗಳನ್ನು ಹಂಚಿಕೊಳ್ಳಬೇಡಿ.

## ಪರೀಕ್ಷಾ ಕೊಠಡಿಯಲ್ಲಿ ಹೇಗಿರಬೇಕು?

ಪ್ರಶ್ನೆ ಪತ್ರಿಕೆ ದೊರೆತ ಮೇಲೆ ಇಡೀ ಪತ್ರಿಕೆಯನ್ನು ಒಮ್ಮೆ ಸರಿಯಾಗಿ ಓದಿಕೊಳ್ಳಿ. ಅದರಲ್ಲಿ ಕೊಟ್ಟಿರುವ ಸೂಚನೆಗಳನ್ನು ಸರಿಯಾಗಿ ಓದಿ ಅದರಂತೆ ಉತ್ತರವನ್ನು ಬರೆಯಿರಿ. ಯಾವ ಪ್ರಶ್ನೆ ಸುಲಭ ಎಂದು ನಿಮಗೆ ಅನಿಸಿದೆಯೋ ಅದರಿಂದ ನಿಮ್ಮ ಉತ್ತರವನ್ನು ಪ್ರಾರಂಭಿಸಿ. ಕಷ್ಟದ ಪ್ರಶ್ನೆಗಳನ್ನು ನಂತರ ಉತ್ತರಿಸಬಹುದು. ಪ್ರಶ್ನೆ ಸಂಖ್ಯೆಯನ್ನು ಮಾರ್ಜಿನ್ನಿನ ಹೊರಗೆ ಸರಿಯಾಗಿ ದಾಖಲಿಸಿ. ಆಗ ನಿಮ್ಮ ಉತ್ತರ ಸರಿಯಾಗಿ ದಾಖಲಾಗುತ್ತದೆ. ಕೇಳಿದ್ದಕ್ಕಿಂತ ಹೆಚ್ಚಿಗೆ ಬರೆದರೆ ಅಂಕಗಳು ಸಿಗುತ್ತವೆ ಎನ್ನುವ ಭ್ರಮೆ ಕೆಲವರಲ್ಲಿ ಇದೆ. ಆದರೆ ಅದು ತಪ್ಪು ತಿಳಿವಳಿಕೆ. ಮುಖ್ಯವಾಗಿ ಕಲಾ ವಿಭಾಗದ ವಿದ್ಯಾರ್ಥಿಗಳು ಪುಟ ತುಂಬಿಸಲು ಇಷ್ಟಪಡುತ್ತಾರೆ. ಯಾವುದೋ ಒಂದು ಪ್ರಶ್ನೆಗೆ ಅತಿಯಾಗಿ ಬರೆದು, ಉಳಿದ ಪ್ರಶ್ನೆಗಳಿಗೆ ಸರಿಯಾಗಿ ಬರೆಯಲಾಗದೇ ಒದ್ದಾಡುತ್ತಾರೆ. ಆಮೇಲೆ ಸಮಯ ಸಾಕಾಗಲಿಲ್ಲ ಎಂದು ದೂರುತ್ತಾರೆ. ಕೇಳಿದ ಪ್ರಶ್ನೆಗೆ ಎಷ್ಟು ವಾಕ್ಯಗಳಲ್ಲಿ ಉತ್ತರಿಸಬೇಕೆಂದು ಹೇಳುತ್ತಾರೋ ಅಷ್ಟೇ ವಾಕ್ಯಗಳಲ್ಲಿ ಉತ್ತರಿಸಿ.

ಉತ್ತರ ಎಲ್ಲ ಬರೆದಾದ ಮೇಲೆ ಮತ್ತೊಮ್ಮೆ ಎಲ್ಲವನ್ನು ಕಣ್ಣಾಡಿಸಿ. ಒಂದು ಪರೀಕ್ಷೆ ಮುಗಿದ ಬಳಿಕ ಅದರ ಬಗ್ಗೆ ಮತ್ತೆ ವಿಚಾರ ವಿನಿಮಯ ಮಾಡಿ ಉಪಯೋಗವಿಲ್ಲ. ಆ ಪರೀಕ್ಷೆ ಅಷ್ಟೇನೂ ಚೆನ್ನಾಗಿ ಆಗಿಲ್ಲ ಎಂದಾದರೆ ಅದರ ಬಗ್ಗೆ ಕೊರಗುವುದರಲ್ಲಿ ಅರ್ಥವಿಲ್ಲ. ಅದರಿಂದ ಮುಂದಿನ ಪರೀಕ್ಷೆಯೂ ಹಾಳಾಗುತ್ತದೆ. ಹಾಗೆ ಮಾಡಿಕೊಳ್ಳಬೇಡಿ. ಮುಂದಿನ ಪರೀಕ್ಷೆಯನ್ನು ಇನ್ನೂ ಚೆನ್ನಾಗಿ ಮಾಡುತ್ತೇನೆ ಎನ್ನುವ ಧೈರ್ಯ ತುಂಬಿಕೊಳ್ಳಿ. ಹೆಚ್ಚಿನ ವಿದ್ಯಾರ್ಥಿಗಳು ಭಾಷೆಯ ಪತ್ರಿಕೆಗಳನ್ನು ಉಡಾಫೆಯಿಂದ ಕಾಣುತ್ತಾರೆ. (ಮುಖ್ಯವಾಗಿ ಪಿಯುಸಿ ವಿದ್ಯಾರ್ಥಿಗಳು) ಇದು ಸರಿಯಾದ ಕ್ರಮ ಅಲ್ಲ. ಇಂಗ್ಲಿಷ್, ಕನ್ನಡ, ಹಿಂದಿ, ಸಂಸ್ಕೃತ, ಫ್ರೆಂಚ್ ಯಾವುದೇ ಇರಲಿ ಅದು ಕೂಡ ಇತರ ಸಬ್ಜೆಕ್ಟ್‌ಗಳಂತೆ ಮುಖ್ಯವೇ ಆಗಿದೆ. ಅವುಗಳಿಗೂ ಅಷ್ಟೇ ಪ್ರಮುಖ ಸ್ಥಾನವನ್ನು ಕೊಡಿ.

## ಪರೀಕ್ಷೆ ಮುಗಿದ ಬಳಿಕ

ಸುಮಾರು 15ರಿಂದ 20 ದಿನಗಳ ಅವಧಿಯಲ್ಲಿ ನಿಮ್ಮ ಎಲ್ಲ ಪರೀಕ್ಷೆಗಳು ಮುಗಿಯುತ್ತವೆ. ಸರಿಯಾಗಿ ಸಿದ್ಧತೆ ಮಾಡಿಕೊಂಡ ನಿಮ್ಮಲ್ಲಿ ಬರೆದದ್ದರ ಬಗ್ಗೆ ಒಂದು ಅಂದಾಜು ಸಿಕ್ಕಿರುತ್ತದೆ. ಅದರ ಬಗ್ಗೆ ನೀವೇ ಒಂದು ಅಂದಾಜು ಮಾಡಿಕೊಂಡು ಫಲಿತಾಂಶ ಬರುವಲ್ಲಿ ತನಕ ಆರಾಮವಾಗಿ ಇರಿ. ಎಂಟ್ರೆನ್ಸ್ ಎಕ್ಸಾಮ್ ಬರೆಯುವವರು ಅದರ ತಯಾರಿ ಮಾಡಿಕೊಳ್ಳಿ. ಎಸ್ಎಸ್ಎಲ್‌ಸಿ, ಪಿಯುಸಿ ಮುಗಿದ ಬಳಿಕ ಏನು ಮಾಡಬಹುದು? ಯಾವ ಕೋರ್ಸ್ ಉತ್ತಮ? ಸಾಂಪ್ರದಾಯಿಕವಾಗಿ ಎಲ್ಲರೂ ಸಾಗುವ ದಾರಿಗಿಂತ ಬೇರೆ ದಾರಿ ಯಾವುದು ಇದೆ? ಎನ್ನುವುದನ್ನು ಬಲ್ಲವರ ಬಳಿ ಕೇಳಿ ತಿಳಿದುಕೊಳ್ಳಿ. ಎಲ್ಲರೂ ಸೈನ್ಸ್–ಕಾಮರ್ಸ್ ತೆಗೆದುಕೊಂಡಿದ್ದಾರೆ ಎಂದು ನೀವೂ ತೆಗೆದುಕೊಳ್ಳಬೇಡಿ. ಎಲ್ಲರೂ ಮೆಡಿಕಲ್ ಮಾಡಿದ್ದಾರೆ ಎಲ್ಲರೂ ಎಂಜಿನಿಯರಿಂಗ್‌ಗೆ ಹೋಗಿದ್ದಾರೆ ನಾನೂ ಹೋಗುತ್ತೇನೆ ಎಂದು ಒಟ್ಟಾರೆಯಾಗಿ ಹೋಗಬೇಡಿ. ನಿಮ್ಮ ಭವಿಷ್ಯವನ್ನು ರೂಪಿಸುವಲ್ಲಿ ನಿಮ್ಮ ಹಿರಿಯರ ಗುರುಗಳ ಮಾರ್ಗದರ್ಶನವೂ ಮುಖ್ಯ.

ಪ್ರತಿಕ್ರಿಯಿಸಿ: feedback@sudha.co.in